# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ. 506/2018</u>

<u>ಸಾಕ್ಷಿದಾರರ ಹೇಳಿಕೆಃ</u>

| | | |
|---|---|---|
| **ಹೆಸರು** | : ಸುರೇಶ ಬಿ | ಚಾಸಾಃ **15** ಪ್ರಾಸಾಃ **9** |
| **ತಂದೆಯ ಹೆಸರು** | : ದೊಡ್ಡಬಸಪ್ಪ | |
| **ವಯಸ್ಸು** | : 50 ವರ್ಷ | |
| **ವೃತ್ತಿ** | : ವ್ಯವಸಾಯ | |
| **ವಾಸಸ್ಥಳ** | : ಕೆಂಗಲಹಳ್ಳಿ ಗ್ರಾಮ | |

ದಿನಾಂಕಃ **22-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ</u>

ಆರೋಪಿ ಗೊತ್ತು. ಮೃತ ಸಿದ್ದಲಿಂಗಯ್ಯ ಗೊತ್ತಿಲ್ಲ. ಚಾಸಾ-**14** ಗೊತ್ತು. ಚಾಸಾ-**13** ಗೊತ್ತಿಲ್ಲ. ಮೃತ ಸಿದ್ದಲಿಂಗಯ್ಯರವರಿಗೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗೇ ಸುಮಾರು 5 ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ 1 ದಾಖಲೆಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-28 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-28(ಬಿ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ದಿಃ 29-08-2017 ರಂದು ಬೆಳಗ್ಗೆ 09-30 ಗಂಟೆ ಸಮಯದಲ್ಲಿ ನಾನು ಕುಂದೂರು-ದಾವಣಗೆರೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಕುಂದೂರು ಕಡೆಯಿಂದ ದಾವಣಗೆರೆ ಕಡೆಗೆ ಕೆಎ-14/ಇಜಿ-1577 ಮೋಟಾರ್ ಸೈಕಲ್ ಅನ್ನು ಮೃತ ಸಿದ್ದಲಿಂಗಯ್ಯ ಚಾಲನೆ ಮಾಡಿಕೊಂಡು ಬರುತ್ತಿದ್ದು ಮತ್ತು ಎದುರಿಗೆ ದಾವಣಗೆರೆ ಕಡೆಯಿಂದ ಕುಂದೂರು ಕಡೆಗೆ ಆರೋಪಿಯು ಕೆಎ-17/ಎ-1699 ಲಗೇಜ್ ಆಟೋವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿದ ಪರಿಣಾಮ ಮೋಟಾರ್ ಸೈಕಲ್ ನ ಸವಾರನು ಬೈಕ್ ಸಮೇತ ರಸ್ತೆಯಲ್ಲಿ ಬಿದಿದ್ದು ಮತ್ತು ನಾನು, ಚಾಸಾ-13 ಮತ್ತು 14 ರವರು ಹತ್ತಿರ ಹೋಗಿ ನೋಡಲಾಗಿ 2 ವಾಹನಗಳು ಜಕಂಗೊಂಡಿದ್ದು ಮತ್ತು ಮೋಟಾರ್ ಸೈಕಲ್ ನ ಸವಾರನಿಗೆ ಬಾಯಿಗೆ ಪೆಟ್ಟು ಬಿದ್ದು ಹಲ್ಲು ಮುರಿದು ಬಲಕುತ್ತಿಗೆಯಿಂದ ಎದೆಯವರೆಗೆ ರಕ್ತಗಾಯಗಳಾಗಿ ಬಲಮೊಣಕಾಲಿನಿಂದ ಮಣಿಕಟ್ಟಿನವರೆಗೆ ಮತ್ತು ಬಲತೋಳು ಭುಜದ ಹತ್ತಿರ ಮುರಿದಿದ್ದು ಮತ್ತು ಆರೋಪಿಯು ಆಟೋವನ್ನು ನಿಲ್ಲಿಸದೇ ಮತ್ತು ಉಪಚರಿಸದೇ ಮತ್ತು ಠಾಣೆಗೆ ಮಾಹಿತಿಯನ್ನು ತಿಳಿಸದೇ ಚಾಲನೆ ಮಾಡಿಕೊಂಡು ಹೋಗಿದ್ದು ನಂತರ ನಾವು 108 ಆಂಬುಲೆನ್ಸ್ ನಲ್ಲಿ ಸಿದ್ದಲಿಂಗಯ್ಯರವರನ್ನು ದಾವಣಗೆರೆ ಆಸ್ಪತ್ರೆಗೆ ಚಾಸಾ-13 ರವರ ಜೊತೆ ಕಳುಹಿಸಿ ಕೊಟ್ಟಿದ್ದು ಮತ್ತು ಸಿದ್ದಲಿಂಗಯ್ಯರವರು ರಸ್ತೆಯ ಮಾರ್ಗದಲ್ಲಿ ಮೃತ ಪಟ್ಟಿರುತ್ತಾರೆ ಎಂದು ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-32 ರಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿ ನಮ್ಮ ಊರಿನವರಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.